**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ.ನಂ. 567/2019**

ಫಿರ್ಯಾದಿ : ಸರ್ಕಾರದ ಪರವಾಗಿ ಹೆಚ್.ಡಿ.ಕೋಟೆ ಪೋಲೀಸ್ ಠಾಣೆ

**-ವಿರುದ್ಧ-**

ಆರೋಪಿ : ಪ್ರದೀಪ.ಆರ್
ಬಿನ್ ರಾಜಗೋಪಾಲ ಪಿಳ್ಳೆ, 42 ವರ್ಷ,
ವಾಸಃ ಹಂಪಾಪುರ ಗ್ರಾಮ
ಹೆಚ್ ಡಿ ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ (ಹೆಚ್ಚುವರಿ) 313 ರಡಿಯಲ್ಲಿ ಆರೋಪಿಯ ಹೇಳಿಕೆಃ**

ಪ್ರಶ್ನೆ-01: ಈ ಪ್ರಕರಣದಲ್ಲಿ ಪಿರ್ಯಾದಿದಾರರ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯಗಳನ್ನು ನೀವು ಕೇಳಿದ್ದೀರಾ ?

ಉತ್ತರ :

ಪ್ರಶ್ನೆ-02: ಫ್ರಾಸಾ.01, ಲಿಂಗರಾಜು, ಕೋಹಳ ಗ್ರಾಮ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯ ನಿರ್ಲಕ್ಷ್ಯತನದಿಂದ ತೀರಿಕೊಂಡ ನಾಗರಾಜು ನನ್ನ ಮಗನಾಗಿರುತ್ತಾನೆ. ನನ್ನ ಮಗ ತೀರಿಕೊಂಡ ನಂತರ ಆರೋಪಿಯು ನನ್ನ ವಿರುದ್ದ ದೂರು ನೀಡಬೇಡಿ, ನನ್ನ ಹೆಂಡತಿಗೆ ಸಂಬಂಧಪಟ್ಟ ಮನೆಯನ್ನು ನಿಮ್ಮ ಹೆಸರಿಗೆ ಮಾಡಿಕೊಡುತ್ತೇನೆ ಎಂದು ದಿನಾಂಕ 28.10.2017 ರಂದು ಆರೋಪಿಯು ನೋಂದಣಿ ಕಛೇರಿಗೆ ನನ್ನನ್ನು ಹಾಗೂ ನನ್ನ ತಮ್ಮನಾದ ಗುರುಸ್ವಾಮಿ ರವರನ್ನು ಕರೆದುಕೊಂಡು ಹೋಗಿ ನನ್ನ ತಮ್ಮನ ಹೆಸರಿಗೆ ಆರೋಪಿಯ ಹೆಂಡತಿಯ ಹೆಸರಿನಲ್ಲಿದ್ದ ಮನೆಯನ್ನು ನೊಂದಣಿ ಕರಾರುಪತ್ರ

ಮಾಡಿಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-03: ಫ್ರಾಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈಗ ನೋಡುತ್ತಿರುವ ದಾಖಲೆಯು ಆರೋಪಿ ಮತ್ತು ಆತನ ಹೆಂಡತಿ ಬರೆದುಕೊಟ್ಟಿರುವ ನೋಂದಣಿ ಕರಾರುಪತ್ರದ ದೃಢೀಕೃತ ನಕಲಾಗಿರುತ್ತದೆ. ಸಾಕ್ಷಿದಾರರು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ34 ಎಂದು ಗುರುತಿಸಲಾಯಿತು. ಸದರಿ ಕರಾರುಪತ್ರದ ಪ್ರಕಾರ ಆರೋಪಿಯು ಮನೆಯ ಕ್ರಯಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಮತ್ತು ಪರಿಹಾರ ನೀಡುತ್ತೇನೆ ಎಂದು ಹೇಳಿರುವ ಹಣವನ್ನು ನೀಡಿರುವುದಿಲ್ಲ. ಆ ಕಾರಣ ನನ್ನ ಮಗ ತೀರಿಕೊಂಡ 6 ತಿಂಗಳ ನಂತರ ನಿಪಿ1 ರಂತೆ ದೂರು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-04: ಫ್ರಾಸಾ.15, ಗುರುಸ್ವಾಮಿ, ಕೋಹಳ ಗ್ರಾಮ ಇವರು ತಮ್ಮ ಸಾಕ್ಷ್ಯದಲ್ಲಿ ಚಾಸ 1 ನನ್ನ ಅಣ್ಣ. ಈ ಪ್ರಕರಣದಲ್ಲಿ ತೀರಿಕೊಂಡ ನಾಗರಾಜು ಚಾಸ 1 ರವರ ಮಗ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ. ಚಾಸ 1 ರವರು ತನ್ನ ಮಗನಿಗೆ ಅನಾರೋಗ್ಯವಿದುದ್ದರಿಂದ ಚಾಸ 1 ರವರು ಆರೋಪಿಯ ಹಂಪಾಪುರದ ಕ್ಲಿನಿಕ್‌ಗೆ ಕರೆದುಕೊಂಡು ಹೋಗಿ ಇಂಜಕ್ಷನ್

ಕೊಡಿಸಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-05: ಫ್ರಾಸಾ.15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸ 1 ರವರ ಮಗನಿಗೆ ಇನ್‌ಫೆಕ್ಷನ್ ಆಗಿ ಅವರು ತೀರಿಕೊಂಡಿರುತ್ತಾರೆ. ಚಾಸ 1 ರವರ ಮಗ ತೀರಿಕೊಂಡ ನಂತರ ಅದೇ ದಿನ ನ್ಯಾಯಾಲಯದ ಮುಂದಿರುವ ಆರೋಪಿಯು ಚಾಸ 1 ರವರ ಮನೆಯ ಹತ್ತಿರ ಬಂದು ಜೀವನಾಂಶಕ್ಕೆಂದು 10 ಲಕ್ಷ ನೀಡುವುದಾಗಿ, ಠಾಣೆಗೆ ದೂರು ನೀಡಬಾರದೆಂದು ಹೇಳಿರುತ್ತಾನೆ. ನಂತರ ಊರಿನ ಹಿರಿಯರು ಸೇರಿ ಒಪ್ಪಿಕೊಳ್ಳುವಂತೆ ಚಾಸ 1 ರವರಿಗೆ ಹೇಳಿದ್ದು ಚಾಸ 1 ರವರು ಒಪ್ಪಿಕೊಂಡಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-06: ಫ್ರಾಸಾ.15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯು ಅಷ್ಟು ಹಣ ನೀಡಲು ಈಗ ಹಣ ಇರುವುದಿಲ್ಲ, ತನ್ನ ಹೆಂಡತಿಯ ಹೆಸರಿನಲ್ಲಿರುವ ಮನೆಗೆ ಸಂಬಂಧಿಸಿದಂತೆ ಕರಾರುಪತ್ರ ಮಾಡಿಕೊಡುವುದಾಗಿ ಹೇಳಿರುತ್ತಾನೆ. ಚಾಸ 1 ರವರು ಮಗನ ಜೊತೆ ಆಸ್ಪತ್ರೆಯಲ್ಲಿದುದ್ದರಿಂದ ಆರೋಪಿಯು ನನ್ನ ಹೆಸರಿಗೆ ಕರಾರುಪತ್ರ ಮಾಡಿಕೊಡುವುದಾಗಿ ಹೇಳಿದ್ದು, ನಂತರ ಆರೋಪಿ ಹಾಗೂ ಅವರ ಹೆಂಡತಿ ನೊಂದಣಿ ಕಛೇರಿಗೆ ಬಂದು ನಿಪಿ34 ರಂತೆ ಕರಾರುಪತ್ರವನ್ನು ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ಮೂಲ ಕರಾರುಪತ್ರ ಚಾಸ 1 ರವರ ಬಳಿ ಇರಬಹುದು ಎಂದು ಸಾಕ್ಷ್ಯ

ನುಡಿದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-07: ಫ್ರಾಸಾ.15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ34 ರಲ್ಲಿರುವ ಎಲ್ಲ ಪುಟಗಳಲ್ಲಿರುವ ಸಹಿಗಳು ಆರೋಪಿ ಮತ್ತು ಅವರ ಹೆಂಡತಿಯ ಸಹಿಗಳಾಗಿದ್ದು, ನೋಂದಣಿ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ನಿಪಿ34 ರಲ್ಲಿರುವ ಭಾವಚಿತ್ರಗಳು ನನ್ನ, ಆರೋಪಿ ಹಾಗೂ ಅವರ ಹೆಂಡತಿಯ ಭಾವಚಿತ್ರವಾಗಿರುತ್ತದೆ. ಆರೋಪಿಯು ನಿಪಿ34 ರಂತೆ ಕರಾರುಪತ್ರದಂತೆ ಕ್ರಯಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಅಥವಾ ಅವರು ಹೇಳಿದಂತೆ 10 ಲಕ್ಷ ಹಣ ನೀಡಿರುವುದಿಲ್ಲ. 6-7 ತಿಂಗಳವರೆಗೆ ಕಾದ ನಂತರ ಆರೋಪಿಯು ಕ್ರಯಪತ್ರ ಬರೆದುಕೊಡಲು ಅಥವಾ ಹಣ ನೀಡದಿದ್ದರಿಂದ ಚಾಸ 1 ರವರು ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತಾರೆ. ಆರೋಪಿಯು ಹಣ ನೀಡುತ್ತೇನೆ, ದೂರು ನೀಡಬಾರದೆಂದು ಹೇಳಿದ್ದರಿಂದ 6 ತಿಂಗಳ ನಂತರ ಚಾಸ 1 ರವರು ದೂರು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-08: ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೇನಾದರೂ ಇದ್ದಾರೆಯೇ?

ಉತ್ತರ :

ಸಿ.ಸಿ ನಂ.567/2019

ಪ್ರಶ್ನೆ-09: ಈ ಪ್ರಕರಣದ ಬಗ್ಗೆ ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ?

ಉತ್ತರ :

(ಮೇಲಿನ ಹೇಳಿಕೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಕನ್ನಡದಲ್ಲಿ ಬರೆದು, ಓದಿ ಹೇಳಿ ನಂತರ ಆರೋಪಿ ಉತ್ತರಿಸಿದ ಭಾಷೆಯಲ್ಲಿಯೇ ನನ್ನ ಸಮಕ್ಷಮದಲ್ಲಿ ಕೇಳಿ ಬರೆದುಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸುತ್ತೇನೆ)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,
ಹೆಚ್.ಡಿ.ಕೋಟೆ

ದಿನಾಂಕಃ